**1 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ,**

**ಕೆ.ಜಿ.ಎಫ್,**

**ಸಿ.ಸಿ. ಸಂಖ್ಯೆ:1203/2024**

**ಸಿ.ಡಬ್ಲೂ: 1/ಪಿ.ಡಬ್ಲೂ: 1**

**ಪ್ರಮಾಣೀಕರಿಸಿದ ದಿನಾಂಕ: 18-02-2026**

| | |
|---|---|
| **ಹೆಸರು** | **ರಾಮಕೃಷ್ಣಪ್ಪ** |
| **ತಂದೆಯ ಹೆಸರು** | **ವೆಂಕಟರಾಮಪ್ಪ** |
| **ವಯಸ್ಸು** | **49 ವರ್ಷ** |
| **ವೃತ್ತಿ** | **ವ್ಯವಸಾಯ** |
| **ವಾಸ** | **ಬೆನ್ನವಾರ ಗ್ರಾಮ** |

**ಮುಖ್ಯ ವಿಚಾರಣೆ:- ಮಾನ್ಯ ಸ.ಸ.ಅ ರವರಿಂದ:-**

1. ಚಾಸಾ 2 ನನಗೆ ಗೊತ್ತು. ಚಾಸಾ3 ನನಗೆ ಗೊತ್ತಿಲ್ಲ. ನ್ಯಾಯಾಲಯದ ಮುಂದೆ ಇರುವ 1 ನೇ ಆರೋಪಿ ನನ್ನ ತಮ್ಮನಾಗಿದ್ದು 2 ನೇ ಆರೋಪಿ ನನ್ನ ಅಣ್ಣನಾಗಿರುತ್ತಾನೆ.

2. ಸರ್ವೆ ನಂ78 ನಮಗೆ ಸೇರಿದ ಜಮೀನಾಗಿದ್ದು ಅದರಲ್ಲಿ 6 ಗುಂಟೆ ಪಂಚಾಯಿತಿ ಮೂಲಕ ನನಗೆ ನನ್ನ ತಾಯಿಯವರು ನೀಡಿರುತ್ತಾರೆ. ಆ ಕಾರಣಕ್ಕೆ ಆರೋಪಿತರಿಗೆ ಅದು ಇಷ್ಟವಾಗದೇ ನನ್ನ ಜೊತೆ ಸುಮಾರು 2 ವರ್ಷಗಳ ಹಿಂದೆ ಜಗಳ ತೆಗೆದು ನನಗೆ ಕೋಲಿನಿಂದ ಬೆನ್ನಿಗೆ, ಎದೆಗೆ ಹಲ್ಲೆ ಮಾಡಿರುತ್ತಾರೆ. ಆ ಸಮಯದಲ್ಲಿ ಆರೋಪಿತರು ನನಗೆ ಅವ್ಯಾಚ್ಯ ಶಬ್ದಗಳಿಂದ ಬೈದಿರುತ್ತಾರೆ. ನಮಗೆ ಸೇರಿದ ಸರ್ವೆ ನಂ.93 ರಲ್ಲಿ ಬೋರ್ ಇದ್ದು ಅದರಿಂದ ನೀರುತೆಗೆಯಲು ಕೂಡ ಆರೋಪಿತರು ನನಗೆ ಬಿಡುವುದಿಲ್ಲ. ನನ್ನ ಮೇಲೆ ಹಲ್ಲೆ ಮಾಡುತ್ತಾರೆ. ಸದರಿ ನಮಗೆ ಸೇರಿದ ಆಸ್ತಿಯಲ್ಲಿ 13 ತೆಂಗಿನ ಮರಗಳು ನನಗೆ ಇದ್ದು ಇನ್ನು 8 ತೆಂಗಿನ ಮರಗಳು ನನಗೆ ಬರಬೇಕಾಗಿದ್ದು ಅದನ್ನು ಆರೋಪಿತರು ನನಗೆ ಕೊಡುವುದಿಲ್ಲ. ಈ ವಿಚಾರಕ್ಕೆ ಸಂಬಂದ ಪಟ್ಟಂತೆ ನಾನು ಪೋಲೀಸರಿಗೆ ದೂರನ್ನು ನೀಡಿರುತ್ತೇನೆ.

3. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ದಾಖಲೆಯು ಹೇಳಿಕೆ ಆಗಿದ್ದು ಅದನ್ನು ಈಗ ನಿಪಿ1 ಎಂದು ಸಾಕ್ಷಿಯ ಸಹಿಯನ್ನು ನಿಪಿ1 ಎ ಎಂದು ಗುರುತಿಸಲಾಯಿತು. ನನಗೆ ಆರೋಪಿತರು ಹಲ್ಲೆ ಮಾಡಲು ಉಪಯೋಗಿಸಿದ ಕೋಲನ್ನು ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದ ಮುಂದೆ ಇರುವ ಕೋಲು ಅದೇ ಆಗಿದ್ದು ಅದನ್ನು ಈಗ ಎಂ ಒ 1 ಎಂದು ಗುರುತಿಸಲಾಯಿತು. ಆ ದಿನ ನನ್ನ ಜೊತೆ ಜಗಳ

ತೆಗೆದು ನನಗೆ ಹಲ್ಲೆ ಮಾಡಿದ ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದ ಮುಂದೆ ಇರುವ ಆರೋಪಿತರು ಅವರೇ ಆಗಿರುತ್ತಾರೆ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ. ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗೆ ಕಾಲಾವಕಾಶ ಕೋರಿರುತ್ತಾರೆ. ಕಡತವನ್ನು ಪರಿಶೀಲಿಸಲಾಗಿ ಸಾಕ್ಷಿಯು ಗಾಯಾಳು ಮತ್ತು ಪ್ರತ್ಯಕ್ಷ ಸಾಕ್ಷಿದಾರರಾಗಿದ್ದು ತನ್ನ ಹೇಳಿಕೆಯ/ದೂರಿನ ಕೆಲವು ಅಂಶಗಳಿಗೆ ವಿರುದ್ಧವಾಗಿ ಹೇಳುವ ಕಾರಣ ಅವರ ಮನವಿಯನ್ನು ಪರಿಗಣಿಸಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು)**

**<u>ಪಾಟೀ ಸವಾಲುಃ- ಮಾನ್ಯ ಸ.ಸ.ಅ ರವರಿಂದಃ-</u>**

4. ನಾನು ನಿಪಿ1 ದೂರಿನಲ್ಲಿ ನನ್ನ ತಂದೆ ತಾಯಿಗೆ ನಾವು 3 ಮಕ್ಕಳಿದ್ದುಸುಮಾರು 20 ವರ್ಷಗಳ ಹಿಂದೆ ನಮ್ಮ ತಂದೆಯವರು ಆಸ್ತಿಗಳಲ್ಲಿ ವಿಭಾಗ ಮಾಡಿಕೊಟ್ಟಿದ್ದು ನನ್ನ ತಾಯಿ ಆದ ಶಾರದಮ್ಮ ರವರು ಸರ್ವೆ ನಂ.78 ರಲ್ಲಿ 25 ಗುಂಟೆ ಜಮೀನನ್ನು ಅವರ ಹೆಸರಿನಲ್ಲಿ ಉಳಿಸಿಕೊಂಡಿದ್ದು ಸದರಿ ಜಮೀನಿನ 6 ಗುಂಟೆಗೆ ಸಂಬಂದ ಪಟ್ಟಂತೆ ನಮ್ಮ ನಡುವೆ ಆಗಾಗ ಜಗಳ ಆಗುತ್ತಿದ್ದು ಪಂಚಾಯಿತಿಕೂಡ ಆಗಿರುತ್ತದೆ ಎಂದು ಹೇಳಿರುತ್ತೇನೆ ಎಂದರೆ ಸರಿ. ಸದರಿ ವಿಚಾರಕ್ಕೆ ಸಂಬಂದಪಟ್ಟಂತೆ ದಿಃ05.02.2024 ರಂದು ಬೆಳಗ್ಗೆ 8.00 ಗಂಟೆಗೆ ನಾನು ಸರ್ವೆ ನಂ 106 ರಲ್ಲಿ ಆಲೂಗಡ್ಡೆ ನಾಟಿ ಮಾಡಲು ಹೋದಾಗ ಸರ್ವೆ ನಂ.93 ರಲ್ಲಿರುವ ಬೋರ್ ವೆಲ್ ನಿಂದ ನೀರು ತೆಗೆಯಲು ಹೋದಾಗಆರೋಪಿತರು ನನ್ನನ್ನು ಅಡ್ಡಿ ಪಡಿಸಿದ್ದು ನಾನು ಕೇಳಿದ್ದಕ್ಕೆ 1ನೇ ಆರೋಪಿಯು ಎಂ ಒ 1 ರಿಂದ ನನ್ನಎಡಗೈ ಮತ್ತು ಎದೆಯ ಮೇಲೆ ಹೊಡೆದು ಊಟ ಗಾಯ ಮಾಡಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸರ್ವೆ ನಂ.106 ಅಲ್ಲ, ಸರ್ವೆ ನಂ.76 ಎನ್ನುತ್ತಾರೆ.

5. ನಂತರ 2ನೇ ಆರೋಪಿಯು ನನ್ನ ಬೆನ್ನಿನ ಮೇಲೆ ಕೈಗಳಿಂದ ಹೊಡೆದು ನೋವುಂಟು ಮಾಡಿರುತ್ತಾರೆ ಹಾಗೂ ಆರೋಪಿತರು ಸೇರಿಕೊಂಡು ನನ್ನನ್ನು ಸಾಯಿಸದೇ ಬಿಡುವುದಿಲ್ಲ ಎಂದು ಪ್ರಾಣ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ.

**<u>ಪಾಟೀ ಸವಾಲುಃ- ಆರೋಪಿ ಪರ ವಕೀಲರು ಪಾಟೀವಾಲಿಗೆ ಸಮಯ ಕೋರಿದ್ದು ಮುಂದೂಡಲಾಯಿತು.</u>**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ).**

**ಓದಿ ಹೇಳಿ ಕೇಳಿ ಸರಿ ಇದೆ**

**1ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಕೆಜಿಎಫ್.**